**<u>ದಿಃ 30.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ. ಪಿ.ಎನ್.ಎ ವಕೀಲರಿಂದಃ ಪ್ರತಿವಾದಿಯರ ಪರವಾಗಿಃ</u>**

11) ನಾನು ವಿಧ್ಯಾಭ್ಯಾಸ ಮಾಡಿರುವದಿಲ್ಲ. ನನ್ನ ಸಾಕ್ಷಿಗಾಗಿ ಸಲ್ಲಿಸಿದ ಮುಖ್ಯ ವಿಚಾರಣೆ ಪ್ರಮಾಣ ಪತ್ರವು ಯಾವ ಭಾಷೆಯಲ್ಲಿ ಇದೆ ಎಂದು ನನಗೆ ಗೊತ್ತಿರುವದಿಲ್ಲ. ಈ ಪ್ರಕರಣದಲ್ಲಿ ಪಕ್ಷಗಾರರಾದ ವಾದಿಗಳು ಮತ್ತು ಪ್ರತಿವಾದಿಗಳು ಯಾರು ಯಾರು ಇರುತ್ತಾರೆ ಎಂದು ನನಗೆ ಗೊತ್ತಿರುವದಿಲ್ಲ. ದಾವಾ ಆಸ್ತಿಯ ಸರ್ವೆ ನಂಬರ ಮತ್ತು ಪ್ಲಾಟ ನಂಬರ 57 ಎಂದು ಮಾತ್ರ ಗೊತ್ತಿರುತ್ತದೆ, ಆದರೆ ಅದರ ಕ್ಷೇತ್ರ ಗೊತ್ತಿರುವದಿಲ್ಲ. ದಾವಾ ಆಸ್ತಿಯ ಚೆಕ್ಕಬಂದಿ ಸಹ ನನಗೆ ಗೊತ್ತಿರುವದಿಲ್ಲ. ದಾವಾ ಆಸ್ತಿಯನ್ನು ನನ್ನ ತಮ್ಮನಾದ ಶಿವನಗೌಡ ಈತನು ಖರೀದಿ ಮಾಡಿ ನನ್ನ ಹೆಸರಿಗೆ ಬರೆದುಕೊಟ್ಟಿರುತ್ತಾನೆ. ಸದರಿ ವಿಷಯವನ್ನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಯಿಸಿರುತ್ತೇನೋ, ಇಲ್ಲವೋ ಎನ್ನುವ ವಿಷಯ ನನಗೆ ಗೊತ್ತಿರುವದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಬರೆಯಲು ನಮ್ಮ ವಕೀಲರಿಗೆ ನಾನು ಮತ್ತು ನನ್ನ ಗಂಡ ಮಾಹಿತಿ ಕೊಟ್ಟಿರುತ್ತೇವೆ.

12) ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನನ್ನ ಉದ್ಯೋಗ ಮನೆಗೆಲಸ ಎಂದು ಬರೆಯಿಸಲಾಗಿದೆ ಅಂದರೆ ಸರಿ. ಇವತ್ತಿನವರೆಗೂ ಸಹ ನಾನು ಮನೆಗೆಲಸ ಮಾತ್ರ ಮಾಡುತ್ತೇನೆ ಅಂದರೆ ಸರಿ. 1 ನೇ ವಾದಿಯು ಇಜಾರಿಲಕಮಾಪುರ ಗ್ರಾಮದ ಫಕ್ಕೀರಪ್ಪ ಹುರಳಿಕುಪ್ಪಿ ಎಂಬ ಅನ್ಯ ಜಾತಿಯ ಯುವಕನನ್ನು ಪ್ರೀತಿಸಿ ವಿವಾಹ ಆಗಿರುತ್ತಾಳೆ ಎನ್ನುವ ವಿಷಯವನ್ನು ಬರೆಯಿಸಿರುತ್ತಾಳೆ ಅಂದರೆ ಸರಿ.

ಫಕ್ಕೀರಪ್ಪ ಹುರಳಿಕುಪ್ಪಿ ಎನ್ನುವವನು ತಳವಾರ ಜಾತಿಯಾಗಿರುತ್ತಾನೆ. ಅದೇ ರೀತಿ ನನ್ನ ಮಗನಾದ 2 ನೇ ವಾದಿ ಮಾಲತೇಶ ಇತನು ರೋಜಾ ಎನ್ನುವ ಹುಡುಗಿಯನ್ನು ಪ್ರೀತಿಸಿ ವಿವಾಹ ಆಗಿರುತ್ತಾನೆ ಎಂದು ಹೇಳಿ ಬರೆಯಿಸಿದ್ದೇನೆ ಅಂದರೆ ಸರಿ. ರೋಜಾ ಎನ್ನುವವಳು ಹರಿಜನ ಜಾತಿಯವಳಾಗಿರುತ್ತಾಳೆ. ನಾವು ಪಂಚಮಸಾಲಿ ಲಿಂಗಾಯತ ಜಾತಿಯವರಾಗಿರುತ್ತೇವೆ.

**13)** ರೇಖಾ ಈಕೆಯ ಮದುವೆಯನ್ನು ನಾವು ನಿಂತು ಮಾಡಿಕೊಟ್ಟಿರುವದಿಲ್ಲ. ಅದೇ ರೀತಿ 2 ನೇ ವಾದಿ ಮಾಲತೇಶ ಈತನ ಮದುವೆಯನ್ನು ಸಹ ನಾವು ನಿಂತು ಮಾಡಿಕೊಟ್ಟಿರುವದಿಲ್ಲ. 1 ನೇ ವಾದಿ ಮತ್ತು 2 ನೇ ವಾದಿ ತಮ್ಮ ತಮ್ಮ ಮದುವೆಗಳನ್ನು ಬೇರೆ ಜಾತಿಯ ಹೆಣ್ಣು ಮಕ್ಕಳ ಜೊತೆಗೆ ಮಾಡಿಕೊಳ್ಳಲು ಮುಂದುವರೆದಿರುತ್ತಾರೆ ಎಂದು ಅದು ಯಾವ ದಿನಾಂಕ, ತಿಂಗಳು ಯಾವ ವರ್ಷ ನನಗೆ ಗೊತ್ತಿರುವದಿಲ್ಲ. ಅದೇ ರೀತಿ 1 ನೇ ವಾದಿ ಮತ್ತು 2 ನೇ ವಾದಿ ನಮ್ಮನ್ನು ಕರೆದು ಯಾವ ಊರಿನಲ್ಲಿ ವಾಸವಾಗಿರುತ್ತಾರೆ ಎನ್ನುವ ವಿಷಯ ನನಗೆ ಗೊತ್ತಿರುವದಿಲ್ಲ. ಆ ವಿಷಯವನ್ನು ತಿಳಿದುಕೊಳ್ಳಲು ಸಹ ಪ್ರಯತ್ನಪಟ್ಟಿರುವದಿಲ್ಲ. ದಾವಾ ಆಸ್ತಿಯು ನನ್ನ ಸ್ವಯಾರ್ಜಿತ ಆಸ್ತಿ ಎಂದು ಬರೆಯಿಸಿದ್ದರ ಕುರಿತಾಗಿ ನಾನು ಈ ಪ್ರಕರಣದಲ್ಲಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೋ, ಇಲ್ಲವೋ ಎಂದು ನನಗೆ ಗೊತ್ತಿರುವದಿಲ್ಲ.

**14)** ಸದರಿ ವಿಷಯದ ಬಗ್ಗೆ ನಾನು ನಮ್ಮ ವಕೀಲರಿಗೆ ಕೇಳಿ ತಿಳಿದುಕೊಳ್ಳುವ ಪ್ರಯತ್ನಪಟ್ಟಿರುವದಿಲ್ಲ. ನಮ್ಮ ಮದುವೆಯಾಗಿ ಅಂದಾಜು 38 ವರ್ಷ ಆಗಿರಬಹುದು. ಮದುವೆಯಾದ ನಂತರ 10 ವರ್ಷ ನಾನು ನಮ್ಮ ತಾಯಿಯ ಮನೆಯಲ್ಲಿ ವಾಸ ಮಾಡಿದ್ದೇನೆ. 10 ವರ್ಷ ನಾನು ನಮ್ಮ ತಾಯಿಯ ಮನೆಯಲ್ಲಿ ವಾಸ ಮಾಡಿದ್ದೇನೆ ಎನ್ನುವ

ಕುರಿತಾಗಿ ಆಧಾರಕಾರ್ಡ ಮತ್ತು ರೇಷನಕಾರ್ಡನ್ನು ಗುತ್ತಲ ಗ್ರಾಮದಲ್ಲಿ ಹಾಜರುಪಡಿಸಿದ್ದೇನೆ. ಸದರಿ ದಾಖಲಾತಿಗಳನ್ನು ಈ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವದಿಲ್ಲ.

10) ನನ್ನ ಮಕ್ಕಳು ಚಿಕ್ಕವರಿದ್ದಾಗ 10 ವರ್ಷದಿಂದ ನಾನು ನಮ್ಮ ತಾಯಿಯ ಮನೆಯಲ್ಲಿ ಇದ್ದೇನು. ಏಕೆಂದರೆ 1 ನೇ ಪ್ರತಿವಾದಿಯಾದಂತಹ ಗುಡ್ಡಪ್ಪ ಈತನ ತಂದೆ ನನ್ನ ಗಂಡನ ಮನೆಯಿಂದ ಹೊರಗೆ ಹಾಕಿದ್ದರಿಂದ ನಾನು ನನ್ನ ತಾಯಿಯ ಮನೆಯಲ್ಲಿ ವಾಸವಾಗಿದ್ದೇನು. ಗುಡ್ಡಪ್ಪ ಈತನ ತಂದೆ ತಿರಕಪ್ಪ ಈತನು ಆತನ ಮನೆಯಿಂದ ನನಗೆ ಹೊರಗಡೆ ಹಾಕಿದ್ದರ ಬಗ್ಗೆ ನಾನು ನನ್ನ ಪ್ರತಿವಾದ ಪತ್ರದಲ್ಲಿ ಬರೆಯಿಸಿರುವದಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಅವಕಾಶವನ್ನು ಕೇಳಲಾಗಿ ಅವಕಾಶ ಕೊಡಲಾಯಿತು.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ, ಹಾವೇರಿ.